**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 43/2025**

| | | |
|---|---|---|
| **ಸಾಕ್ಷಿದಾರರ ಹೆಸರು** | **ಃ ಚಂದನ್** | **ಸಿ.ಡಬ್ಲ್ಯೂಃ 2** |
| **ತಂದೆಯ ಹೆಸರು** | **ಃ ಶ್ರೀನಿವಾಸ್ ಗೌಡ** | **ಪಿ.ಡಬ್ಲೂಃ 2** |
| **ವಯಸ್ಸು** | **ಃ 41** | |
| **ಉದ್ಯೋಗ** | **ಃ ಪಾನ್ ಅಂಗಡಿ ವ್ಯಾಪಾರಿ** | |
| **ವಾಸಸ್ಥಳ** | **ಃ ಅಡಿಗೆಬೈಲು ಗ್ರಾಮ, ಕೊಪ್ಪ ತಾಲ್ಲೂಕು** | |

**ದಿನಾಂಕಃ 07.07.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ದಿನಾಂಕಃ 06.12.2024 ರಂದು ಬೆಳಗ್ಗೆ ಸುಮಾರು 11 ಗಂಟೆ ವೇಳೆಗೆ ಬಾಳೆಹೊನ್ನೂರಿನಲ್ಲಿರುವ ಹೋಟೆಲ್ ಸೌಂದರ್ಯ ಬಳಿ ಮಹಜರ್ ಮಾಡುವುದಿದೆ ಅದಕ್ಕಾಗಿ ಸಾಕ್ಷಿದಾರನಾಗಿ ಸಹಕರಿಸುವಂತೆ ಬಾಳೆಹೊನ್ನೂರು ಪೊಲೀಸರು ತಿಳಿಸಿದರು. ಆ ಸಂದರ್ಭದಲ್ಲಿ ಅಲ್ಲಿ ಚಾಸಾ-1, ಚಾಸಾ-3 ಮತ್ತು 4 ರವರು ಹಾಜರಿದ್ದರು. ಹೋಟೆಲ್ ಸೌಂದರ್ಯ ಎದುರುಗಡೆ ಕೃತ್ಯ ನಡೆದ ಸ್ಥಳ ಎಂದು ಪೊಲೀಸರು ನನಗೆ ತೋರಿಸಿದರು. ಅದೇ ಸಂದರ್ಭದಲ್ಲಿ ಸದರಿ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ 12.30 ರವರೆಗೆ ಸ್ಥಳದಲ್ಲಿಯೇ ದಾಖಲು ಮಾಡಿಕೊಂಡರು. ಸದರಿ ಸ್ಥಳದಲ್ಲಿ ಬಿದ್ದಿದ್ದ ಒಂದು ಬಿಯರ್ ಬಾಟಲಿಯನ್ನು ಚಾಸಾ-4 ರವರು ಪೊಲೀಸರಿಗೆ ನಮ್ಮ ಸಮಕ್ಷಮ ತೋರಿಸಿ ಕೃತ್ಯಕ್ಕೆ ಬಳಸಿದ ಬಿಯರ್ ಬಾಟಲಿ ಇದೇ ಆಗಿರುತ್ತದೆ ಎಂದು ತಿಳಿಸಿದರು. ಸದರಿ ಬಿಯರ್ ಬಾಟಲಿಯನ್ನು ನಮ್ಮ ಸಮಕ್ಷಮ ಪೊಲೀಸರು ಜಪ್ತು ಮಾಡಿಕೊಂಡರು. ಸದರಿ ಸಮಯದಲ್ಲಿ ಪೊಲೀಸರು 3-4 ಪೋಟೋಗಳನ್ನು ತೆಗೆದುಕೊಂಡರು.

ಸಾಕ್ಷಿಯು ಸ್ಥಳ ಮತ್ತು ಜಪ್ತು ಮಹಜರುಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಒಂದು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದ ಮುಂದಿರುವ ಒಂದು ಒಡೆದ ಬಿಯರ್ ಬಾಟಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ತನ್ನ ಸಮಕ್ಷಮ

ಅಮಾನತುಪಡಿಸಿಕೊಂಡಿರುವುದಾಗಿ ನುಡಿಯುತ್ತಾರೆ. ಸದರಿ ಬಿಯರ್ ಬಾಟಲಿ ಈಗಾಗಲೇ ಎಂಒ-1 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ದಿನಾಂಕಃ 06.12.2024 ರಂದು ಮಹಜರ್ ಮಾಡುವ ಕಾಲಕ್ಕೆ ಚಾಸಾ-3 ಮತ್ತು 4 ಹಾಗೂ ನನ್ನ ಸಮಕ್ಷಮ ಮಾತ್ರ ಮಹಜರ್ ಮಾಡಲಾಯಿತು ಎಂದರೆ ಸರಿ. ಆ ಸಂದರ್ಭದಲ್ಲಿ ಚಾಸಾ-1 ರವರು ಹಾಜರಿರಲಿಲ್ಲ ಎಂದರೆ ಸರಿ.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದಃಃ**

ನ್ಯಾಯಾಲಯದ ಸಮಯವಾದ್ದರಿಂದ ಪಾಟಿ ಸವಾಲಿಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**